313

ಮೈಸೂರ ಗೆಜೆಟ್.

ಸಂ. 42] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 48.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ॥ 5, ಸನ್ 1907.

IIIನೆ ಭಾಗ.

ಲೆಜಿಸ್ಲೆಟಿವು ರೆಗ್ಯುಲೇಷನುಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೆಟಿವು ಇಲಾಖೆ.

ಇಸ್ತಿಹಾರ್‌ನಾಮೆ.

ನಂ. 194—ಎಲ್. ಸಿ. ತಾರೀಖು 6ನೆ ನವೆಂಬರ್ 1907.

ಮೈಸೂರು ನ್ಯಾಯವಿಧಾಯಕ ಸಭೆಯು ಕೆಲಸಗಳನ್ನು ನಡೆಸುವ ಬಗ್ಗೆ ಏರ್ಪಟ್ಟ ನಿಬಂಧನೆಗಳ ಪೈಕಿ 40ನೆ ನಿಬಂಧನೆಯು ಮೇರೆಗೆ, 1900ನೆ ಇಸವಿಯ 3ನೆ ನಂಬರಿನ ಕೋರ್ಟ್ ಫೀಜು ರೆಗ್ಯುಲೇಷನ್ನು ತಿದ್ದುಪಾಟು ಮಾಡುವುದಕ್ಕಾಗಿ ನೇಮಿಸಲ್ಪಟ್ಟ ಸೆಲೆಕ್ಟ್ ಕಮಿಟಿ ಯಾ ನಿಯುಕ್ತ ಸಮಾಜದವರ ರಿಪೋರ್ಟನ್ನೂ, ಸದರಿ ಕಮಿಟಿಯವರಿಂದ ತಿದ್ದುಪಾಟಾದ ಬಿಲ್ಲನ್ನೂ ಸಮಸ್ತರ ತಿಳಿವಳಿಕೆಯ ಬಗ್ಗೆ ಈ ಕೆಳಗೆ ಪ್ರಕಟಿಸಿ ಇದೆ.

ಅಪ್ಪಣೆಯ ಮೇರೆಗೆ,
ಕೆ. ವೈಲಾರಿರಾವ್,
ಮೈಸೂರು ನ್ಯಾಯವಿಧಾಯಕ ಸಭೆಯ ಸೆಕ್ರಟರಿ.

ನಿಯುಕ್ತ ಸಮಾಜದವರ ರಿಪೋರ್ಟು.

1900ನೆ ಇಸವಿಯ 3ನೆ ನಂಬರಿನ ಕೋರ್ಟ್ ಫೀಜು ರೆಗ್ಯುಲೇಷನ್ನನ್ನು ತಿದ್ದುಪಡಿ ಮಾಡುವ ಬಿಲ್ಲನ್ನು ವಿಮರ್ಶೆ ಮಾಡುವು ಬಕ್ಕೋಸ್ಕರ ನೇಮಿಸಲ್ಪಟ್ಟ ನಿಯುಕ್ತ ಸಮಾಜದ ಮೆಂಬರುಗಳಾದ ನಾವು ರಿಪೋರ್ಟು ಮಾಡುವುದೇನೆಂದರೆ :—

ಗೇಣಿಗೆ ಯಾ ಬಾಡಿಗೆಗೆ ಕೊಟ್ಟವನು ಅಥವಾ ಜಮಿನಿನ ಒಡೆಯನು ಜಮಿನಿನ, ಮನೆಗಳ ಮತ್ತು ತೋಟಗಳ ಸ್ವಾಧೀನ ಪಡೆಯುವುದಕ್ಕಾಗಿ ಗೇಣಿದಾರನ ಮೇಲೆ ಅಥವಾ ಒಕ್ತಲಿನ ಮೇಲೆ ತರುವ ವ್ಯಾಜ್ಯಗಳಲ್ಲಿ ಕೊಡಬೇಕಾದ ಕೋರ್ಟು ಫೀಜು, ನಿರಖಾಗಿ 10 ರೂಪಾಯಿ ಯಾಗಲಿ ಅಥವಾ ದಾವಾ ಅರ್ಜಿಯನ್ನು ಹಾಜರ್ಮಾಡಿದ ತಾರೀಖಿನ ಹಿಂದಿನ ವರ್ಷಕ್ಕೆ ಕೊಡಬೇಕಾದ ಗುತ್ತಿಗೆ ವೊಖಲಗಿಗನುಗುಣವಾಗಿಯಾಗಲಿ—ಈ ಎರಡರ ಪೈಕಿ ಯಾವುದು ಹೆಚ್ಚಿಗೆ ಆ ವೊಖಲಗು-ಫೀಜು ಆಗಿರತಕ್ಕದ್ದೆಂದು ವಿಧಿಸಬೇಕೆಂತ ಬಿಲ್ಲಿನಲ್ಲಿ ಸಲಹೆಯಾಗಿದೆ. ಆದರೆ, ಕನಿಷ್ಠಪಕ್ಷ 10 ರೂಪಾಯಿಯೆಂತ ನಿರಖು ಮಾಡುವುದು, ಸಾಲಿಯಾನಾ ಜುಜುವಿ ಗುತ್ತಿಗೆ ಬರುವ ಆಸ್ತಿಗಳ ವಿಷಯದಲ್ಲಿ ಬಹಳಕಷ್ಟವಾಗಿ ಪರಿಣಮಿಸುತ್ತದೆಯೆಂದು ನಾವು ಯೋಚಿಸುತ್ತೇವೆ. ಕೋ

ಟ್ಟಿಗೆ ಬರುವ ಅನೇಕ ಮೊಕದ್ದಮೆಗಳಲ್ಲಿ ವ್ಯಾಜ್ಯಕ್ಕೆ ಸಂಬಂಧಪಟ್ಟ ಸ್ವತ್ತಿನ ಸಾಲಿಯಾನಾ ಗುತ್ತಿಗೆ ಬೆಲೆಯು ಬಹಳ ಸ್ವಲ್ಪವಾಗಿರುವ ಅಂಶವನ್ನು ಯೋಚಿಸಿ ನೋಡಿದರೆ, ಈ ಕನಿಷ್ಠಪಕ್ಷದ ಫೀಜನ್ನು ಕುದ್ಧಾಂಗವಾಗಿ ತೆಗೆದೇಹಾಕಬೇಕೆಂದು ನಾವು ಅಭಿಪ್ರಾಯ ಪಡುತ್ತೇವೆ. 1870ನೆ ಇಸವಿಯ ಕೋರ್ಟು ಫೀಜು ಆಕ್ಟ್ನನ್ನು ತಿದ್ದುಪಡಿ ಮಾಡುವ 1905ನೆ ಇಸವಿಯ 6ನೆ ನಂಬರ್ ಆಕ್ಟ್ಸಿನಿಂದ ಬ್ರಿಟಿಷ್ ಇಂಡಿಯಾವಿನಲ್ಲಿ ಈ ಬಿಲ್ಲಿನ ಉದ್ದೇಶವು ನೆರವೇರಿ ಇದೆ. ನಮ್ಮ ಕೋರ್ಟು ಫೀಜು ರೆಗ್ಯುಲೇಷನೂ ಬ್ರಿಟಿಷ್ ಇಂಡಿಯಾವಿನ ಕಾನೂನೂ ಪ್ರಾಯಶಃ ಒಂದೇ ಆಗಿರುವುದರಿಂದ ಅದೇ ತಿದ್ದುಪಾಟನ್ನೇ ಅದೇ ಮಾತುಗಳಲ್ಲಿಯೇ ಇಲ್ಲಿಯೂ ಮಾಡಬಹುದೆಂತ ನಮ್ಮ ಅಭಿಪ್ರಾಯವಿದೆ. ಆದಕಾರಣ ಇದರಡಿ ಕಂಡಂತೆ ಸದರಿ ಬಿಲ್ಲನ್ನು ತಿದ್ದುಪಡಿ ಮಾಬೇಕೆಂತ ಸಲಹೆ ಮಾಡುತ್ತೇವೆ :—

"ಕೋರ್ಟು ಫೀಜು ರೆಗ್ಯುಲೇಷನನ್ನು ತಿದ್ದುಪಾಟು ಮಾಡುವುದು ಯುಕ್ತವಾಗಿರುವುದರಿಂದ ಇದರಡಿ ಕಂಡ ಮೇರೆಗೆ ವಿಧಿಸಲು ಶ್ರೀಮನ್ಮಹಾರಾಜರವರು ಹುಕುಂ ದಯಪಾಲಿಸಿರುತ್ತಾರೆ :—

1. ಸದರಿ ರೆಗ್ಯುಲೇಷನಿನ 4ನೆ ಪ್ರಕರಣದ 11ನೆ ಒಳ ಪ್ರಕರಣದಲ್ಲಿ,

(1) (*c*) ಕಲಮಿನ ತರುವಾಯ, ಇದರಡಿ ಕಂಡ ಕಲಮನ್ನು ಸೇರಿಸತಕ್ಕದ್ದು, ಅದೇನೆಂದರೆ—

'(*cc*) ಒಬ್ಬ ಬಕ್ಕ ಲಿಂದ—ಗೇಣಿಯುವಾಯಿದೆ ಮುಗಿದಮೇಲೂ ಸ್ವತ್ತನ್ನು ಸ್ವಾಧೀನದಲ್ಲಿಟ್ಟುಕೊಂಡಿರುವ ಒಕ್ಕಲೂ ಸೇರಿ—ಸ್ಥಿರಸ್ವತ್ತನ್ನು ವಾಪಸುಪಡೆಯುವ ಬಗ್ಗೆ ಮೊತ್ತು,

(2) 'ಜಮಿನು' ಎಂಬ ಮಾತಿಗೆ ಬದಲಾಗಿ, ಅದು ಬರುವ ಎರಡು ಸ್ಥಳಗಳಲ್ಲಿಯೂ, 'ಸ್ಥಿರಸ್ವತ್ತು' ಎಂಬ ಮಾತನ್ನು ಸೇರಿಸತಕ್ಕದ್ದು."

(ರುಜು) ಎಸ್. ನಾರಾಯಣರಾವ್, (ಚೀರ್ಮ್ಯಾ).
" ಟಿ. ಆನಂದರಾವ್.
" ಎ. ರಂಗಸಾಮ್ಯಯ್ಯಂಗಾರ್.
" ಎಂ. ಸಿ. ರಂಗ್ಯಯ್ಯಂಗಾರ್.
" ಬಿ. ನಾಗಪ್ಪ.